# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ: 15-11-2021 ರ ಸೋಮವಾರದಂದು ಪೂರ್ವಾಹ್ನ 11-30 ಗಂಟೆಗೆ ನಡೆದ "ಎಂಟನೇ ಸಾಮಾನ್ಯ ಸಿಂಡಿಕೇಟಿನ ಸಭೆ"ಯ ನಡವಳಿ.

ಹಾಜರಿದ್ದ ಸದಸ್ಯರುಗಳು:

| | | |
|---|---|---|
| 1. | ಪ್ರೊ. ಜಿ.ಹೇಮಂತಕುಮಾರ್ | ಕುಲಪತಿಗಳು ಹಾಗೂ ಅಧ್ಯಕ್ಷರು |
| 2. | ಪ್ರೊ. ರಮೇಶ್ | ಸದಸ್ಯರು |
| 3. | ಶ್ರೀ ಎಂ.ಬಿ. ಗಪ್ಪಣ್ಣ | ಸದಸ್ಯರು |
| 4. | ಡಾ. ಚೈತ್ರ ನಾರಾಯಣ | ಸದಸ್ಯರು |
| 5. | ಡಾ. ವೆಂಕಟೇಶಯ್ಯ | ಸದಸ್ಯರು |
| 6. | ಡಾ. ನಾಗರಾಜು | ಸದಸ್ಯರು |
| 7. | ಡಾ. ಬಿ.ರಾಜಣ್ಣ | ಸದಸ್ಯರು |
| 8. | ಡಾ. ವೆಂಕಟೇಶ್ ಜೆ ಎನ್ | ಸದಸ್ಯರು |
| 9. | ಶ್ರೀ. ಆರ್.ಪ್ರದೀಪ್ ಕುಮಾರ್ ದೀಕ್ಷಿತ್ | ಸದಸ್ಯರು |
| 10. | ಶ್ರೀ ಎಸ್.ಡಿ.ದೊಡ್ಡಚಾರಿ | ಸದಸ್ಯರು |
| 11. | ಶ್ರೀಮತಿ ವೈ.ಕೆ.ಪವಿತ್ರ | ಸದಸ್ಯರು |
| 12. | ಡಾ. ಈ.ಸಿ.ನಿಂಗರಾಜ್ ಗೌಡ | ಸದಸ್ಯರು |
| 13. | ಡಾ. ಎಂ.ಎಸ್.ದಾಮೋಧರ | ಸದಸ್ಯರು |
| 14. | ಪ್ರೊ. ಎ.ಪಿ.ಜ್ಞಾನ ಪ್ರಕಾಶ್, ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 15. | ಡಾ. ಸಂಗೀತಾ ಗಜಾನನ್ ಭಟ್, ಹಣಕಾಸು ಅಧಿಕಾರಿಗಳು | ಸದಸ್ಯರು |
| 16. | ಪ್ರೊ. ಆರ್.ಶಿವಪ್ಪ | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ |

ಹಾಜರಾಗದ ಸದಸ್ಯರು:

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
2. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು
3. ಡಾ. ಸೈಯದ್ ಕಾರುಝ ಮೊಹಿದ್ದೀನ್
4. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
6. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
7. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸಭೆಗೆ ಹಾಜರಿದ್ದ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸಭೆಗೆ ಸ್ವಾಗತಿಸಿದರು.

ಮೊದಲಿಗೆ ಕನ್ನಡದ ಖ್ಯಾತ ನಟ, ನಿರ್ಮಾಪಕ ಹಾಗೂ ಗಾಯಕರಾದ ಶ್ರೀ ಪುನೀತ್ ರಾಜಕುಮಾರ್ (ಅಪ್ಪು ಎಂದು ಖ್ಯಾತರಾಗಿದ್ದು) ಅವರು ದಿನಾಂಕ: 29-10-2021 ರಂದು ಹೃದಯಘಾತದಿಂದ ನಿಧನ

ಹೊಂದಿರುವ ಪ್ರಯುಕ್ತ ಸಭೆಯು ಸಂತಾಪ ಸೂಚಿಸಿ, ಎರಡು ನಿಮಿಷಗಳ ಮೌನಾಚರಣೆಯೊಂದಿಗೆ ಮೃತರ ಆತ್ಮಕ್ಕೆ ಶಾಂತಿ ಕೋರಲಾಯಿತು.

ನಂತರ, ಹೊಸದಾಗಿ ಸಿಂಡಿಕೇಟ್ ಸದಸ್ಯರಾಗಿ ನೇಮಕವಾಗಿರುವ ಪ್ರೊ.ರಮೇಶ್, ಡೀನರು, ಕಾನೂನು ನಿಕಾಯ, ಕಾನೂನು ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಸಭೆಗೆ ಸ್ವಾಗತಿಸಿ, ಪರಿಚಯಿಸಲಾಯಿತು.

ಹಾಗೂ

ಇದುವರೆವಿಗೂ ಸಿಂಡಿಕೇಟ್ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಪ್ರೊ. ಜಿ.ವೆಂಕಟೇಶ್‌ಕುಮಾರ್, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ, ಮನೋವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

ತದನಂತರ, ಮಾನ್ಯ ಕುಲಪತಿಗಳು ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿ, ಕಾರ್ಯಸೂಚಿಯಲ್ಲಿನ ವಿಷಯಗಳನ್ನು ಸಭೆಯಲ್ಲಿ ಮಂಡಿಸಿದರು.

| **ವಿಷಯ ಸಂಖ್ಯೆ** | **ವಿಷಯ ಸಂಕ್ಷಿಪ್ತವಾಗಿ** |
|---|---|
| ದಿನಾಂಕ: 03-09-2021ರಂದು ಜರುಗಿದ "ಏಳನೇ ಸಾಮಾನ್ಯ ಸಿಂಡಿಕೇಟಿನ ಸಭೆ"ಯ ನಡವಳಿಯನ್ನು ಹಾಗೂ ಕ್ರಮ ಕೈಗೊಂಡಿರುವ ವರದಿಗಳನ್ನು ದೃಢೀಕರಿಸುವ ಬಗ್ಗೆ. | |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಾಹಿತಿ ಡಾ.ಯು.ಆರ್.ಅನಂತಮೂರ್ತಿ ಇವರ ಹೆಸರಿನಲ್ಲಿ ಅಧ್ಯಯನ ಪೀಠವನ್ನು ಸ್ಥಾಪಿಸುವ ಕುರಿತಂತೆ ಸನ್ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆಗೊಂಡಿರುವ "ಡಾ. ಯು.ಆರ್.ಅನಂತಮೂರ್ತಿ ಅಧ್ಯಯನ ಪೀಠ"ದ ಪರಿನಿಯಮಾವಳಿಯ ಉದ್ದೇಶಗಳನ್ನು ಈಡೇರಿಸಲು ಅಧಿಸೂಚನೆ/ಪ್ರಕಟಣೆ ಹೊರಡಿಸಲು ಸಿಂಡಿಕೇಟ್ ಸಭೆಯು ನಿರ್ಣಯಿಸಲಾಗಿತ್ತು ಎಂಬುದರ ಬದಲಾಗಿ "ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಾಹಿತಿ ಡಾ.ಯು.ಆರ್.ಅನಂತಮೂರ್ತಿ ಇವರ ಹೆಸರಿನಲ್ಲಿ ಅಧ್ಯಯನ ಪೀಠವನ್ನು ಸ್ಥಾಪಿಸುವ ಕುರಿತಂತೆ ಸನ್ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆಗೊಂಡಿರುವ "ಡಾ. ಯು.ಆರ್.ಅನಂತಮೂರ್ತಿ ಅಧ್ಯಯನ ಪೀಠ"ದ ಪರಿನಿಯಮಾವಳಿಯ ಉದ್ದೇಶಗಳನ್ನು ಈಡೇರಿಸಲು ಅಧಿಸೂಚನೆ/ಪ್ರಕಟಣೆ ಹೊರಡಿಸುವ ಸಂಬಂಧ ಮುಂದಿನ ಸಿಂಡಿಕೇಟ್ ಸಭೆಗಳಲ್ಲಿ ವಿವರವಾಗಿ ಚರ್ಚಿಸಲು ತೀರ್ಮಾನಿಸಲಾಯಿತು ತಿದ್ದುಪಡಿ ಮಾಡುವುದರೊಂದಿಗೆ<br><br>ಹಾಗೂ<br><br>ವಿಷಯ ಸಂಖ್ಯೆ: 8.6ರ "ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರೊಬ್ಬರ ಹೆಸರನ್ನು ನಾಮನಿರ್ದೇಶನ ಮಾಡುವ ಸಂಬಂಧ ಚರ್ಚಿಸಿದ ಸಭೆಯು ಶ್ರೀ ಆರ್.ಪ್ರದೀಪ್ ಕುಮಾರ್ ದೀಕ್ಷಿತ್ ಅವರನ್ನು ಸಿಂಡಿಕೇಟ್ ಸದಸ್ಯತ್ವದ ಅವಧಿಯವರೆಗೆ ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು" ಎಂಬ ತೀರ್ಮಾನವನ್ನು ಹಿಂಪಡೆಯುವುದರೊಂದಿಗೆ "ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರೊಬ್ಬರ ಹೆಸರನ್ನು ನಾಮನಿರ್ದೇಶನ ಮಾಡುವ ಸಂಬಂಧ ಚರ್ಚಿಸಿದ ಸಭೆಯು ಶ್ರೀ ಆರ್.ಪ್ರದೀಪ್ ಕುಮಾರ್ ದೀಕ್ಷಿತ್ ಅವರನ್ನು ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು" ಎಂಬ ನಿರ್ಣಯವನ್ನು ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರಿಗೆ ಕಳುಹಿಸುವುದರೊಂದಿಗೆ ದಿನಾಂಕ: 03-09-2021ರಂದು ಜರುಗಿದ "ಏಳನೇ ಸಾಮಾನ್ಯ ಸಿಂಡಿಕೇಟಿನ ಸಭೆ"ಯ ನಡವಳಿಯನ್ನು ಹಾಗೂ ಕ್ರಮ ಕೈಗೊಂಡಿರುವ ವರದಿಗಳನ್ನು ದೃಢೀಕರಿಸಲಾಯಿತು. |

| | |
|---|---|
| ದಿನಾಂಕ: 24-09-2021ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯ ನಡವಳಿಗಳನ್ನು ಹಾಗೂ ಕ್ರಮ ಕೈಗೊಂಡಿರುವ ವರದಿಯನ್ನು ದೃಢೀಕರಿಸುವ ಬಗ್ಗೆ. | |
| **ತೀರ್ಮಾನ** | ದಿನಾಂಕ: 24-09-2021ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯ ನಡವಳಿಗಳನ್ನು ಹಾಗೂ ಕ್ರಮ ಕೈಗೊಂಡಿರುವ ವರದಿಯನ್ನು ದೃಢೀಕರಿಸಲಾಯಿತು. |
| **ಸಾಮಾನ್ಯ ಸಭೆ** 2021/9.1 | 2022ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋಮಾನ ತಲುಪಿ ನಿವೃತ್ತರಾಗುವ ನೌಕರರಿಗೆ ಅನುಮತಿ ನೀಡುವ ಬಗ್ಗೆ. |
| **ತೀರ್ಮಾನ** | 2022ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋಮಾನ ತಲುಪಿ ನಿವೃತ್ತರಾಗುವ ನೌಕರರ ಪಟ್ಟಿಯನ್ನು ಪರಿಶೀಲಿಸಿದ ಸಭೆಯು ವಿಶ್ವವಿದ್ಯಾನಿಲಯದ ಸೇವೆಯಿಂದ ವಯೋನಿವೃತ್ತಿ ಹೊಂದಲು ಅನುಮೋದಿಸಿತು. |
| **ಸಾಮಾನ್ಯ ಸಭೆ** 2021/9.2 | ದಿವಂಗತ ಮಂಜೇಗೌಡ, ಪ್ರಯೋಗಾಲಯ ಸಹಾಯಕರು, ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಮಗನಾದ ಶ್ರೀ ಮೋಹಿತ್ ಎಂ. ಅವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| **ತೀರ್ಮಾನ** | ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವಾಗಲೇ ನಿಧನರಾದ ನೌಕರರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಮಗಳ ಅನ್ವಯ ದಿವಂಗತ ಮಂಜೇಗೌಡ, ಪ್ರಯೋಗಾಲಯ ಸಹಾಯಕರು, ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಮಗನಾದ ಶ್ರೀ ಮೋಹಿತ್ ಎಂ ಇವರು ಉದ್ಯೋಗ ಕೋರಿ ನಿಗಧಿತ ನಮೂನೆಯಲ್ಲಿ ಸಲ್ಲಿಸಿರುವ ಅರ್ಜಿ ಹಾಗೂ ಅರ್ಜಿಯಲ್ಲಿ ಲಗತ್ತಿಸಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿದ ಸಭೆಯು ಶ್ರೀ ಮೋಹಿತ್ ಎಂ ಇವರನ್ನು ಅನುಕಂಪದ ಆಧಾರದ ಮೇಲೆ ದ್ವಿತೀಯ ದರ್ಜೆ ಗುಮಾಸ್ತರ ಹುದ್ದೆಯಲ್ಲಿ ನೇಮಕಾತಿ ಮಾಡಲು ಅನುಮೋದಿಸಿತು. |
| **ಸಾಮಾನ್ಯ ಸಭೆ** 2021/9.3 | ದಿವಂಗತ ಪ್ರೊ. ಸುಭಾಷ್ ಎಸ್. ಸಿದ್ದಣ್ಣನವರ್, ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಅವರ ಪತ್ನಿಯಾದ ಶ್ರೀಮತಿ ಪುಷ್ಪಾವತಿ ಚಂದ್ರಶೇಖರಪ್ಪರವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| **ತೀರ್ಮಾನ** | ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವಾಗಲೇ ನಿಧನರಾದ ನೌಕರರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಮಗಳ ಅನ್ವಯ ದಿವಂಗತ ಪ್ರೊ. ಸುಭಾಷ್ ಎಸ್. ಸಿದ್ದಣ್ಣನವರ್, ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಅವರ ಪತ್ನಿಯಾದ ಶ್ರೀಮತಿ ಪುಷ್ಪಾವತಿ ಚಂದ್ರಶೇಖರಪ್ಪ ಇವರು ಉದ್ಯೋಗ ಕೋರಿ ನಿಗಧಿತ ನಮೂನೆಯಲ್ಲಿ ಸಲ್ಲಿಸಿರುವ ಅರ್ಜಿ ಹಾಗೂ ಅರ್ಜಿಯಲ್ಲಿ ಲಗತ್ತಿಸಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿದ ಸಭೆಯು ಶ್ರೀಮತಿ ಪುಷ್ಪಾವತಿ ಚಂದ್ರಶೇಖರಪ್ಪ ಇವರನ್ನು ಅನುಕಂಪದ ಆಧಾರದ ಮೇಲೆ ದ್ವಿತೀಯ ದರ್ಜೆ ಗುಮಾಸ್ತರ ಹುದ್ದೆಯಲ್ಲಿ ನೇಮಕಾತಿ ಮಾಡಲು ಅನುಮೋದಿಸಿತು. |
| **ಸಾಮಾನ್ಯ ಸಭೆ** 2021/9.4 | Approval for Transfer of Probiotic Cultures isolated by Prof. M.Y. Sreenivasa of DOS in Microbiology to Patent Co. of Europe for a Fair Value. |
| **ತೀರ್ಮಾನ** | APPROVED |

| | |
|---|---|
| ಸಾಮಾನ್ಯ ಸಭೆ 2021/9.5 | ಡಾ. ಎಸ್. ಚಂದ್ರಕಿರಣ್, ಪ್ರಾಧ್ಯಾಪಕರು, ಸರ್ ಎಂ. ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರ, ಮಂಡ್ಯ ಇವರಿಗೆ ದಿನಾಂಕ : 01-08-2021 ರಿಂದ 31-07-2022ರವರೆಗೆ "ಕುಳವಾಡಿಕೆ-ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ವಿಷಯವಾಗಿ ಸಂಶೋಧನಾ ಅಧ್ಯಯನವನ್ನು ಕೈಗೊಳ್ಳಲು ಒಂದು ವರ್ಷದ ಕಾಲಾವಧಿಗೆ ಸಬಾಟಿಕಲ್ ರಜೆಯನ್ನು ಮಂಜೂರು ಮಾಡಿರುವುದರ ಬಗ್ಗೆ. |
| ತೀರ್ಮಾನ | ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ತಜ್ಞರ ಸಮಿತಿ ಸಭೆಯ ಶಿಫಾರಸ್ಸಿನನ್ವಯ ಹಾಗೂ ಸಿಂಡಿಕೇಟ್ ಸಭೆಯ ತೀರ್ಮಾನವನ್ನು ಕಾಯ್ದಿರಿಸಿ ಡಾ. ಎಸ್.ಚಂದ್ರಕಿರಣ್ ಅವರಿಗೆ ದಿನಾಂಕ: 01-08-2021 ರಿಂದ 31-07-2022 ರವರೆಗೆ "ಕುಳವಾಡಿಕೆ-ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ವಿಷಯವಾಗಿ ಸಂಶೋಧನಾ ಅಧ್ಯಯನವನ್ನು ಕೈಗೊಳ್ಳಲು ಒಂದು ವರ್ಷದ ಕಾಲಾವಧಿಗೆ ವಿವಿ ಆದೇಶ ಸಂಖ್ಯೆ: ಇಟ.10/63/2021-22, ದಿನಾಂಕ: 10-08-2021ರ ಆದೇಶದ ಮೇರೆಗೆ ಸಬಾಟಿಕಲ್ ರಜೆಯನ್ನು ಮಂಜೂರು ಮಾಡಿರವುದನ್ನು ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2021/9.6 | ದಿನಾಂಕ : 27-09-2021ರಂದು ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ನಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕದ ಸ್ಥಾಯಿ ಸಮಿತಿ ಸಭೆಯ ಶಿಫಾರಸ್ಸನ್ನು ಪರಿಗಣಿಸುವ ಬಗೆಗೆ. |
| ತೀರ್ಮಾನ | ದಿನಾಂಕ : 27-09-2021ರಂದು ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ನಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕದ ಸ್ಥಾಯಿ ಸಮಿತಿ ಸಭೆಯ ನಡವಳಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2021/9.7 | ದೂರ ಶಿಕ್ಷಣ ನಿರ್ದೇಶನಾಲಯ ಕಾರ್ಯಕ್ರಮದಡಿಯಲ್ಲಿ ಜರುಗುವ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಪಠ್ಯ ರಚಿಸಿರುವ ಅಧ್ಯಾಪಕರುಗಳ ಪಟ್ಟಿ ಹಾಗೂ ಗೌರವಧನ ನೀಡಲು ಅನುಮೋದನೆ ಪಡೆಯುವ ಬಗ್ಗೆ. |
| ತೀರ್ಮಾನ | ದೂರ ಶಿಕ್ಷಣ ನಿರ್ದೇಶನಾಲಯ ಕಾರ್ಯಕ್ರಮದಡಿಯಲ್ಲಿ ಜರುಗುವ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಪಠ್ಯ ರಚಿಸಿರುವ ಅಧ್ಯಾಪಕರುಗಳ ಪಟ್ಟಿಯನ್ನು ದಿನಾಂಕ: 21-01-2021ರಂದು ಜರುಗಿದ ಸಿಂಡಿಕೇಟ್ ಸಭೆಯ ತೀರ್ಮಾನದನ್ವಯ ಸಂಬಂಧಪಟ್ಟ ವಿಷಯ ಸಂಯೋಜಕರಿಂದ ಅನುಮೋದನೆ ಪಡೆದಿರುವುದನ್ನು ಗಮನಿಸಿದ ಸಭೆಯು ಗೌರವಧನ ಪಾವತಿಸಲು ಸಭೆಯಲ್ಲಿ ತೀಮಾನಿಸಲಾಯಿತು. |
| ಸಾಮಾನ್ಯ ಸಭೆ 2021/9.8 | ಮೈಸೂರು ವಿಶ್ವವಿದ್ಯಾನಿಲಯಕ್ಕೆ 1 Gbps ಇಂಟರ್‌ನೆಟ್ ಸಂಪರ್ಕ ಪಡೆಯುವ ವೆಚ್ಚವನ್ನು ಪಾವತಿಸುವ ಸಂಬಂಧ ಹೊರಡಿಸಿರುವ ಆದೇಶವನ್ನು ಅನುಸಮರ್ಥನೆಗಾಗಿ ಮಂಡಿಸುವ ಬಗ್ಗೆ. |
| ತೀರ್ಮಾನ | ಇನ್‌ಫಾರ್ಮೇಷನ್ ಅಂಡ್ ಕಮ್ಯೂನಿಕೇಷನ್ ಡಿವಿಜನ್ (ಐ.ಸಿ.ಡಿ) ನಿರ್ದೇಶಕರ ಮನವಿಯ ಮೇರೆಗೆ ಇಂಟರ್‌ನೆಟ್ ಸಂಪರ್ಕ ಪಡೆಯಲು ತಗಲುವ ಒಟ್ಟಾರೆ ವೆಚ್ಚ ರೂ.13,30,000/-ಗಳನ್ನು ಪಾವತಿಸುವ ಬದಲು 04 ಕಂತುಗಳಲ್ಲಿ ತಲಾ ರೂ.3,92,352/-ಗಳನ್ನು ಪಾವತಿಸಲು ಅನುಮತಿ ನೀಡಿ, ದಿನಾಂಕ: 04-08-2021 ರಂದು ಪರಿಷ್ಕೃತ ಆದೇಶ ಹೊರಡಿಸಿರುವುದನ್ನು ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2021/9.9 | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಿರುವ ಪ್ಲಾನಿಂಗ್ ಕಮಿಷನ್ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಮುಂದಿನ ಒಂದು ವರ್ಷದ ಅವಧಿಗೆ ಮುಂದುವರೆಸುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಿರುವ ಪ್ಲಾನಿಂಗ್ ಕಮಿಷನ್ ಪೀಠದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದ ಪ್ರೊ. ಮಂಜಪ್ಪ ಡಿ. ಹೊಸಮನೆ ಇವರ ನೇಮಕಾತಿ ಅವಧಿಯು ದಿನಾಂಕ: 30-09-2021ಕ್ಕೆ ಪೂರ್ಣಗೊಂಡಿದ್ದು, ಅಧ್ಯಯನ ಪೀಠಗಳ ಅಧಿನಿಯಮ ಕಂಡಿಕೆ VII (3)ರಲ್ಲಿ ನಮೂದಿಸಿರುವಂತೆ "The |

| | |
|---|---|
| | appointment of the Visiting Professor shall be for a three years tenure basis at time. There shall be an evaluation before the end of three years, for renewal or for making new appointment of a Visiting Professor, if necessary" ಅನ್ವಯ ಪ್ರೊ. ಮಂಜಪ್ಪ ಡಿ. ಹೊಸಮನೆ ಇವರನ್ನು ಮತ್ತೊಂದು ವರ್ಷದ ಅವಧಿಗೆ (ಮೂರನೇ ವರ್ಷ) ರೂ.10,000/-ಗಳ ಗೌರವ ಸಂಭಾವನೆಯೊಂದಿಗೆ ಪ್ಲಾನಿಂಗ್ ಕಮಿಷನ್ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ನೇಮಕ ಮಾಡಲು ಸಭೆಯಲ್ಲಿ ಅನುಮೋದಿಸಲಾಯಿತು. |
| ಸಾಮಾನ್ಯ ಸಭೆ 2021/9.10 | Center for the Study of Social Exclusion and Inclusive Policy ಕೇಂದ್ರಕ್ಕೆ ಸಂಬಂಧಿಸಿದ ಕರಡು ಅಧಿನಿಯಮವನ್ನು ಅನುಮೋದಿಸುವ ಬಗ್ಗೆ. |
| ತೀರ್ಮಾನ | Center for the Study of Social Exclusion and Inclusive Policy ಕೇಂದ್ರಕ್ಕೆ ಸಂಬಂಧಿಸಿದ ಪರಿಷ್ಕೃತ ಕರಡು ಪರಿನಿಯಮಾವಳಿಯನ್ನು ಘನತೆವೆತ್ತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಲು ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2021/9.11 | ಶ್ರೀ ಮಂಟೇಸ್ವಾಮಿ, ಸಿದ್ದಪ್ಪಾಜಿ, ರಾಚಪ್ಪಾಜಿ ಇವರುಗಳ ಹೆಸರಿನಲ್ಲಿ ಅಧ್ಯಯನ ಪೀಠಕ್ಕೆ ಸ್ಥಾಪನೆಗೆ ಹಾಗೂ ಅದರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ರಚಿಸಲಾಗಿರುವ ಕರಡು ಅಧಿನಿಯಮದ ಅನುಮೋದನೆ ಬಗ್ಗೆ. |
| ತೀರ್ಮಾನ | ಶ್ರೀ ಮಂಟೇಸ್ವಾಮಿ, ಸಿದ್ದಪ್ಪಾಜಿ, ರಾಚಪ್ಪಾಜಿ ಇವರುಗಳ ಹೆಸರಿನಲ್ಲಿ ಅಧ್ಯಯನ ಪೀಠ ಸ್ಥಾಪನೆಗೆ ಹಾಗೂ ಅದರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ರಚಿಸಲಾಗಿರುವ ಕರಡು ಅಧಿನಿಯಮವನ್ನು ಘನತೆವೆತ್ತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಲು ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2021/9.12 | "ಡಾ. ಎಸ್. ಶ್ರೀಕಂಠಶಾಸ್ತ್ರಿ ಚಿನ್ನದ ಪದಕ" ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಅನ್ವಯ ಪ್ರಕರಣ 31 (2) (IX) ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ, ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢಿಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೆ.80ರಷ್ಟು ಬಡ್ಡಿ ಹಣವನ್ನು M.A in Ancient History and Archaeology ಸಂಬಂಧಿತ ವಿಷಯ/ಪತ್ರಿಕೆಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾದ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ಚಿನ್ನದ ಪದಕ ನೀಡುವ ಸಂಬಂಧ ಮೈಸೂರು ವಿಶ್ವವಿದ್ಯಾನಿಲಯದಲ್ಲಿ "ಡಾ. ಎಸ್.ಶ್ರೀಕಂಠ ಶಾಸ್ತ್ರಿ ಚಿನ್ನದ ಪದಕ" ದತ್ತಿಯನ್ನು ಪುನರ್ ಸ್ಥಾಪನೆ ಮಾಡಲು ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2021/9.13 | ಪ್ರೊ. ಚಂದ್ರಶೇಖರ ಅಡಿಗ, ಪ್ರಾಧ್ಯಾಪಕರು, ಗಣಿತಶಾಸ್ತ್ರ ಅಧ್ಯಯನ ವಿಭಾಗ ಅವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಿರುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 53(10)ರಲ್ಲಿರುವ ಅವಕಾಶದನುಸಾರ ಹಾಗೂ ದಿನಾಂಕ: 16-07-2021ರಂದು ಜರುಗಿದ ವಿಭಾಗ ಪರಿಷತ್ತಿನ ಸಭೆಯ ಶಿಫಾರಸ್ಸಿನನ್ವಯ, ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಪ್ರೊ.ಚಂದ್ರಶೇಖರ ಅಡಿಗ, ನಿವೃತ್ತ ಪ್ರಾಧ್ಯಾಪಕರು, ಗಣಿತಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 06-08-2021ರಿಂದ ಒಂದು ವರ್ಷದ ಅವಧಿಗೆ ಸಂದರ್ಶಕ ಪ್ರಾಧ್ಯಾಪಕರಾಗಿ ಮಾಹೆಯಾನ ರೂ.25,000/-ಗಳ ಗೌರವಧನದೊಂದಿಗೆ ನೇಮಕ ಮಾಡಿರುವುದನ್ನು ಸಭೆಯು ಅನುಸಮರ್ಥಿಸಿತು. |

| | |
|---|---|
| ಸಾಮಾನ್ಯ ಸಭೆ 2021/9.14 | ಇಂಗ್ಲೀಷ್ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| ತೀರ್ಮಾನ | ಇಂಗ್ಲೀಷ್ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ವಿವೇಚಾನುಸಾರ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2021/9.15 | ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳು ಪದೋನ್ನತಿ ಹೊಂದಿರುವ ಪ್ರಯುಕ್ತ ವೇತನ ನಿಗಧಿಪಡಿಸಿ ಹೊರಡಿಸಿರುವ ಆದೇಶಗಳನ್ನು ಮಾರ್ಪಡಿಸಿ ಕಾಲ್ಪನಿಕ ವೇತನ ಬಡ್ತಿಗಳನ್ನು ಸೇರಿಸಿ ಪರಿಷ್ಕೃತ ಆದೇಶ ನೀಡುವಂತೆ ಮನವಿ ಸಲ್ಲಿಸಿರುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳು ಪದೋನ್ನತಿ ಹೊಂದಿರುವ ಪ್ರಯುಕ್ತ ವೇತನ ನಿಗಧಿಪಡಿಸಿ ಹೊರಡಿಸಿರುವ ಆದೇಶಗಳನ್ನು ಮಾರ್ಪಡಿಸಿ ಅಧ್ಯಾಪಕರುಗಳಿಗೆ ಒಂದು ಕಾಲ್ಪನಿಕ ವೇತನ ಬಡ್ತಿಯನ್ನು ಸೇರಿಸಿ ಪರಿಷ್ಕೃತ ಆದೇಶ ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| ಸಾಮಾನ್ಯ ಸಭೆ 2021/9.16 | ಪಿಎಚ್.ಡಿ. ಮಹಾಪ್ರಬಂಧವನ್ನು ಆಯಾಯ ಭಾಷೆಗಳಲ್ಲಿ ಸಲ್ಲಿಸಲು ಅವಕಾಶ ಕಲ್ಪಿಸಿಕೊಡುವ ಸಂಬಂಧ ನಡೆದ ಉಪಸಮಿತಿಯ ವರದಿ. |
| ತೀರ್ಮಾನ | ಪಿಎಚ್.ಡಿ. ಮಹಾಪ್ರಬಂಧವನ್ನು ಆಯಾಯ ಭಾಷೆಗಳಲ್ಲಿ (ಅಂದರೆ ಸಂಸ್ಕೃತ ಭಾಷೆಯ ಮಹಾಪ್ರಬಂಧವನ್ನು ಸಂಸ್ಕೃತ ಭಾಷೆಯಲ್ಲಿಯೇ) ಸಲ್ಲಿಸಲು ಅವಕಾಶ ಕಲ್ಪಿಸಿಕೊಡುವ ಸಂಬಂಧ ಉಪಸಮಿತಿಯ ವರದಿಯನ್ನು ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2021/9.17 | ದಿನಾಂಕ:02-08-2021ರಂದು ಜರುಗಿದ ಕಟ್ಟಡ ಸಮಿತಿ ಸಭೆಯ ನಡಾವಳಿಯನ್ನು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ. |
| ತೀರ್ಮಾನ | ದಿನಾಂಕ: 02-08-2021 ರಂದು ಜರುಗಿದ ಕಟ್ಟಡ ಸಮಿತಿ ಸಭೆಯ ನಡಾವಳಿಯನ್ನು ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2021/9.18 | ಸಂಖ್ಯಾಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| | ದಿನಾಂಕ 03-09-2021ರಂದು ಜರುಗಿದ ಸಿಂಡಿಕೇಟ್ ಸಭೆಯ ತೀರ್ಮಾನದನ್ವಯ, ಪ್ರೊ. ಗೂಟಿ ದಿವಾನ್ ಜಿ, ಪ್ರಾಧ್ಯಾಪಕರು, ಸಂಖ್ಯಾಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 04-11-2021ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿತ್ತು. ಆದರೆ. ಪ್ರೊ. ಗೂಟಿ ದಿವಾನ್ ಜಿ ಅವರು ದಿನಾಂಕ: 25-10-2021ರ ಪತ್ರದಲ್ಲಿ ನನಗೆ ಆರೋಗ್ಯ ಸರಿಯಿಲ್ಲದ ಕಾರಣ ವಿಭಾಗದ ಅಧ್ಯಕ್ಷರ ಜವಾಬ್ದಾರಿಯನ್ನು ನಿರ್ವಹಿಸಲು ಸಾಧ್ಯವಾಗುವುದಿಲ್ಲವೆಂದು ಮನವಿ ಸಲ್ಲಿಸಿರುತ್ತಾರೆ. |
| ತೀರ್ಮಾನ | ಪ್ರೊ. ಗೂಟಿ ದಿವಾನ್ ಜಿ ಅವರು ವಿಶ್ವವಿದ್ಯಾನಿಲಯಕ್ಕೆ ದಿನಾಂಕ: 25-10-2021ರ ಪತ್ರದಲ್ಲಿ ಸಲ್ಲಿಸಿರುವ ಮನವಿಯನ್ನು ಪರಿಗಣಿಸಿದ ಸಭೆಯು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಸದರಿ ವಿಭಾಗದ ಅಧ್ಯಾಪಕರ ಜೇಷ್ಠತಾ ಪಟ್ಟಿಯಲ್ಲಿ ಹಿರಿಯರಾಗಿರುವವರನ್ನು ಸಂಖ್ಯಾಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ತೀರ್ಮಾನಿಸಲಾಯಿತು. |

| | |
|---|---|
| ಸಾಮಾನ್ಯ ಸಭೆ 2021/9.19 | ರಾಷ್ಟ್ರೀಯ ಶಿಕ್ಷಣ ನೀತಿ 2020 (NEP) ಅನುಸಾರ Regulations Governing The Choice Based Credit Semester Scheme with Multiple Entry and Exit Options in the Undergraduate and Post – graduate Degree Programs ಅನ್ನು ಸರ್ಕಾರದ ಅಂಕಿತಕ್ಕಾಗಿ ಕಳುಹಿಸುವ ಬಗ್ಗೆ |
| ತೀರ್ಮಾನ | ರಾಷ್ಟ್ರೀಯ ಶಿಕ್ಷಣ ನೀತಿ 2020 (NEP-2020) ಅನುಸಾರ ಹಾಗೂ ಮೈಸೂರು ವಿಶ್ವವಿದ್ಯಾನಿಲಯವು ರಚಿಸಿದ್ದ ಸಮಿತಿ ಶಿಫಾರಸ್ಸಿನನ್ವಯ ಸಿದ್ಧಪಡಿಸಲಾಗಿರುವ Regulations Governing the Choice Based Credit System Scheme with Multiple Entry and Exit Options in the Undergraduate and Post-graduate Degree Programs ವಿನಿಯಮಾವಳಿಯನ್ನು ಘನತೆವೆತ್ತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2021/9.20 | Retirement of Post-Graduate Teachers during the Calendar Year-2022. |
| ತೀರ್ಮಾನ | The Syndicate approved the teachers working in the Post-Graduate Department of Studies to retire on attaining the age of superannuation during the calendar year 2022 and also for re-employment on contractual basis. If required fill the end of respective Semester. |
| ಸಾಮಾನ್ಯ ಸಭೆ 2021/9.21 | iPEC Edutech, MIT ಕ್ಯಾಂಪಸ್, 2ನೇ ಮಹಡಿ, ಬೆಳವಾಡಿ, ಶ್ರೀರಂಗಪಟ್ಟಣ ತಾ., ಮಂಡ್ಯ ಜಿಲ್ಲೆ ಇವರ ಸಂಸ್ಥೆಗೆ Specialized Programme ಅಡಿಯಲ್ಲಿ 1. Certificate Course in Data Science 2. Certificate Course in Machine Learning with Python Programming 3. Certificate Course in Digital Health ಕೋರ್ಸ್‌ಗಳನ್ನು ಪ್ರಾರಂಭಿಸಲು ಅನುಮತಿ ನೀಡಿರುವ ಸಂಬಂಧ ಅನುಮೋದನೆಯನ್ನು ಕೋರುವ ಬಗ್ಗೆ. |
| ತೀರ್ಮಾನ | ಪರಿವೀಕ್ಷಣಾ ಸಮಿತಿಯ ವರದಿಯನುಸಾರ ಮತ್ತು "The University of Mysore-Recognition of Certain Institutions for Specified Studies / Specialized and Research Statutes 2008" ಅಧಿನಿಯಮದಲ್ಲಿರುವ ಅವಕಾಶದನುಸಾರ ಹಾಗೂ ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, iPEC Edutech, MIT ಕ್ಯಾಂಪಸ್, 2ನೇ ಮಹಡಿ, ಬೆಳವಾಡಿ, ಶ್ರೀರಂಗಪಟ್ಟಣ ತಾ., ಮಂಡ್ಯ ಜಿಲ್ಲೆ ಇವರ ಸಂಸ್ಥೆಗೆ Specialized Programme ಅಡಿಯಲ್ಲಿ 1. Certificate Course in Data Science 2. Certificate Course in Machine Learning with Python Programming and 3. Certificate Course in Digital Health ಎಂಬ 03 ಸರ್ಟಿಫಿಕೇಟ್ ಕೋರ್ಸ್‌ಗಳನ್ನು 2021-22ನೇ ಸಾಲಿನಿಂದ ಪ್ರಾರಂಭಿಸಲು ಅನುಮತಿಸಿ, ದಿನಾಂಕ: 28-10-2021 ರಂದು ಅಧಿಸೂಚನೆ ಹೊರಡಿಸಿರುವುದನ್ನು ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2021/9.22 | 4ನೇ ಆವೃತ್ತಿಯ ಮಾನ್ಯತೆ ಸಂಬಂಧ ನ್ಯಾಕ್ ಪೀರ್ ಸಮಿತಿಯು ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿ ಸಲ್ಲಿಸಿರುವ ವರದಿಯ ಬಗೆಗೆ. |
| ತೀರ್ಮಾನ | 4ನೇ ಆವೃತ್ತಿಯ ಮಾನ್ಯತೆ ಸಂಬಂಧ ನ್ಯಾಕ್ ಪೀರ್ ಸಮಿತಿಯು ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿ ಸಲ್ಲಿಸಿರುವ ವರದಿಯನ್ನು ಗಮನಿಸಲಾಯಿತು. |

| | |
|---|---|
| ಸಾಮಾನ್ಯ ಸಭೆ 2021/9.23 | ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕ / ಸ್ನಾತಕೋತ್ತರ ಅಧ್ಯಯನ ವಿಭಾಗ / ಕೇಂದ್ರ/ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅತಿಥಿ ಉಪನ್ಯಾಸಕರುಗಳ ಸೇವೆಯನ್ನು 2021-22ನೇ ಸಾಲಿನವರೆಗೆ ಆಹ್ವಾನಿಸುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯಕ್ಕೆ ನ್ಯಾಕ್ ತಂಡವು ಭೇಟಿ ನೀಡುತ್ತಿದ್ದ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಚಟುವಟಿಕೆ ಯಥಾಸ್ಥಿತಿ ಮುಂದುವರೆಸುವ ಹಿತದೃಷ್ಟಿಯಿಂದ ಇದೊಂದು ವಿಶೇಷ ಸಂದರ್ಭವೆಂದು ಪರಿಗಣಿಸಿ, ಸಿಂಡಿಕೇಟ್ ಸಭೆಯ ತೀರ್ಮಾನವನ್ನು ಕಾಯ್ದಿರಿಸಿ 2020-21ನೇ ಸಾಲಿನಲ್ಲಿ ಸ್ನಾತಕೋತ್ತರ ವಿಷಯವಾಗಿ (ಘಟಕ ಕಾಲೇಜುಗಳಲ್ಲಿನ ಸ್ನಾತಕೋತ್ತರ ವಿಷಯ ಹೊರತುಪಡಿಸಿ) ಆಹ್ವಾನಿಸಲಾಗಿದ್ದ ಎಲ್ಲಾ ಅತಿಥಿ ಉಪನ್ಯಾಸಕರು / ಪಿಡಿಎಫ್ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಅಭ್ಯರ್ಥಿಗಳು ಹಾಗೂ ಆಹ್ವಾನಿತ ಅಧ್ಯಾಪಕರುಗಳನ್ನು 2020-21ನೇ ಸಾಲಿನಲ್ಲಿ ನಿರ್ವಹಿಸುತ್ತಿದ್ದ ಕಾರ್ಯಭಾರದಂತೆಯೇ 2021-22ನೇ ಶೈಕ್ಷಣಿಕ ಸಾಲಿಗೂ ಹಂಚಿಕೆ ಮಾಡಿ ಆಹ್ವಾನಿಸಿರುವುದನ್ನು ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2021/9.24 | ಕುರುಬಾರಹಳ್ಳಿಯ ರೀ ಸರ್ವೇ ನಂ. 5ರ 22 ಎಕರೆ ಜಮೀನಿನಲ್ಲಿ ಸೈನ್ಸ್ ಪಾರ್ಕ್/ಪ್ಲಾನಿಟೋರಿಯಂ ನಿರ್ಮಾಣ ಮಾಡಲು 03 ಎಕರೆ ಜಮೀನನ್ನು ನೀಡುವ ಬಗ್ಗೆ. |
| ತೀರ್ಮಾನ | ಕುರುಬಾರಹಳ್ಳಿಯ ರೀ ಸರ್ವೇ ನಂ. 5ರ 22 ಎಕರೆ ಜಮೀನಿನಲ್ಲಿ ಸೈನ್ಸ್ ಪಾರ್ಕ್‌ಗೆ 07 ಎಕರೆ ಜಮೀನನ್ನು ಮತ್ತು ಪ್ಲಾನಿಟೋರಿಯಂ ನಿರ್ಮಾಣ ಮಾಡಲು 03 ಎಕರೆ ಜಮೀನನ್ನು ನೀಡಲು ಹಾಗೂ ಒಡಂಬಡಿಕೆಗೆ (MOU) ಸಹಿ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2021/9.25 | Retirement of Teachers of Constituent Colleges during the Calendar Year-2022. |
| ತೀರ್ಮಾನ | Retirement of Teachers of Constituent Colleges during the Calendar Year-2022 approved by the Syndicate. |
| ಸಾಮಾನ್ಯ ಸಭೆ 2021/9.26 | Organic Chemistry, Chemistry, School of Law, Statistics ಅಧ್ಯಯನ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳು ಐದು ವರ್ಷಗಳ ಅವಧಿಗೆ ಮುಂದುವರೆಸುವಂತೆ ಕೋರಿರುವ ಬಗ್ಗೆ. |
| ತೀರ್ಮಾನ | ಸಂಬಂಧಪಟ್ಟ ವಿಭಾಗಾಧ್ಯಕ್ಷರ ಶಿಫಾರಸ್ಸಿನೊಂದಿಗೆ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳಾಗಿ ಮುಂದುವರೆಸಲು ಕೋರಿರುವ ಈ ಕೆಳಕಂಡ 06 ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳನ್ನು ಪ್ರತಿ ವರ್ಷ ಎರಡು ಪ್ರತಿಷ್ಠಿತ ನಿಯತಕಾಲಿಕೆ (Reputed Journal) ಗಳಲ್ಲಿ ಪ್ರಕಟಿಸಬೇಕೆಂದು ಷರತ್ತಿನೊಂದಿಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000 ಪ್ರಕರಣ. 56ರ ಅನ್ವಯ ಬಿಡುಗಡೆಗೊಳಿಸಿರುವ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳನ್ನು ಎರಡು ವರ್ಷಗಳ ಅವಧಿಗೆ "Two years appointment with a break of Two days after one year" ನೇಮಕ ಮಾಡಲು ತೀರ್ಮಾನಿಸಲಾಯಿತು. |

| Sl.No. | Name | Subject |
|---|---|---|
| 1 | Dr. Prshanth K N | Chemistry |
| 2 | Dr. Raksha K R | Chemistry |
| 3 | Dr. Sharath Kumar | Chemistry |
| 4 | Dr. Swaroop T R | Organic Chemistry |
| 5 | Dr. Sharma Tumminakatti | Organic Chemistry |
| 6 | Dr. Gurudatt D M | Organic Chemistry |

<table>
<tr><td></td><td>ಹಾಗೆಯೇ, ಈ ಕೆಳಕಂಡ 03 ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳು ಸಂಬಂಧಪಟ್ಟ ವಿಭಾಗಾಧ್ಯಕ್ಷರುಗಳಿಂದ ಶಿಫಾರಸ್ಸು ಮಾಡಿರುವ ಮನವಿಯನ್ನು ಸಲ್ಲಿಸಿದ್ದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲು ನಿರ್ಣಯಿಸಲಾಯಿತು.
<table>
<tr><th>Sl.No.</th><th>Name</th><th>Subject</th></tr>
<tr><td>1</td><td>Mr. Lohith R</td><td>University School of Law</td></tr>
<tr><td>2</td><td>Dr. Vidyalaxmi K</td><td>Statistics</td></tr>
<tr><td>3</td><td>Yashawantha M</td><td>Statistics</td></tr>
</table></td></tr>
<tr><td>ಸಾಮಾನ್ಯ ಸಭೆ<br>2021/9.27</td><td>ದಿವಂಗತ ಚಿನ್ನಸ್ವಾಮಿ, ತೋಟಗಾರರು, ತೋಟಗಾರಿಕಾ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಮಗನಾದ ಶ್ರೀ ಮಂಜುನಾಥ ಸಿ. ಅವರು ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ.</td></tr>
<tr><td>ತೀರ್ಮಾನ</td><td>ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವಾಗಲೇ ನಿಧನರಾದ ನೌಕರರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಮಗಳ ಅನ್ವಯ ದಿವಂಗತ ಚಿನ್ನಸ್ವಾಮಿ, ತೋಟಗಾರರು, ತೋಟಗಾರಿಕಾ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಮಗನಾದ ಶ್ರೀ ಮಂಜುನಾಥ ಸಿ. ಇವರು ಉದ್ಯೋಗ ಕೋರಿ ನಿಗಧಿತ ನಮೂನೆಯಲ್ಲಿ ಸಲ್ಲಿಸಿರುವ ಅರ್ಜಿ ಹಾಗೂ ಅರ್ಜಿಯಲ್ಲಿ ಲಗತ್ತಿಸಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿದ ಸಭೆಯು ಶ್ರೀ ಮಂಜುನಾಥ ಸಿ ಇವರನ್ನು ಅನುಕಂಪದ ಆಧಾರದ ಮೇಲೆ ದ್ವಿತೀಯ ದರ್ಜೆ ಗುಮಾಸ್ತರ ಹುದ್ದೆಯಲ್ಲಿ ನೇಮಕಾತಿ ಮಾಡಲು ಅನುಮೋದಿಸಿತು.</td></tr>
<tr><td>ಸಾಮಾನ್ಯ ಸಭೆ<br>2021/9.28</td><td>ದಿವಂಗತ ರಾಮ, ತೋಟಗಾರರು, ತೋಟಗಾರಿಕಾ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಮಗನಾದ ಶ್ರೀ ಜಯರಾಮ್ ಆರ್. ಅವರು ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ.</td></tr>
<tr><td>ತೀರ್ಮಾನ</td><td>ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವಾಗಲೇ ನಿಧನರಾದ ನೌಕರರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಮಗಳ ಅನ್ವಯ ದಿವಂಗತ ರಾಮ, ತೋಟಗಾರರು, ತೋಟಗಾರಿಕಾ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಮಗನಾದ ಶ್ರೀ ಜಯರಾಮ್ ಆರ್. ಇವರು ಉದ್ಯೋಗ ಕೋರಿ ನಿಗಧಿತ ನಮೂನೆಯಲ್ಲಿ ಸಲ್ಲಿಸಿರುವ ಅರ್ಜಿ ಹಾಗೂ ಅರ್ಜಿಯಲ್ಲಿ ಲಗತ್ತಿಸಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿದ ಸಭೆಯು ಶ್ರೀ ಜಯರಾಮ್ ಆರ್ ಇವರನ್ನು ಅನುಕಂಪದ ಆಧಾರದ ಮೇಲೆ ದ್ವಿತೀಯ ದರ್ಜೆ ಗುಮಾಸ್ತರ ಹುದ್ದೆಯಲ್ಲಿ ನೇಮಕಾತಿ ಮಾಡಲು ಅನುಮೋದಿಸಿತು.</td></tr>
<tr><td>ಸಾಮಾನ್ಯ ಸಭೆ<br>2021/9.29</td><td>ದಿವಂಗತ ಡಾ. ಪುಟ್ಟಯ್ಯ, ಪ್ರಾಧ್ಯಾಪಕರು, ಇತಿಹಾಸ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಮಗನಾದ ಶ್ರೀ ಡಿ.ಪಿ. ವಿಕಾಸ್ ಅವರು ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ.</td></tr>
<tr><td>ತೀರ್ಮಾನ</td><td>ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವಾಗಲೇ ನಿಧನರಾದ ನೌಕರರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಮಗಳ ಅನ್ವಯ ದಿವಂಗತ ಡಾ. ಪುಟ್ಟಯ್ಯ, ಪ್ರಾಧ್ಯಾಪಕರು, ಇತಿಹಾಸ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಮಗನಾದ ಶ್ರೀ ಡಿ.ಪಿ. ವಿಕಾಸ್ ಇವರು ಉದ್ಯೋಗ ಕೋರಿ ನಿಗಧಿತ ನಮೂನೆಯಲ್ಲಿ ಸಲ್ಲಿಸಿರುವ ಅರ್ಜಿ ಹಾಗೂ ಅರ್ಜಿಯಲ್ಲಿ ಲಗತ್ತಿಸಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿದ ಸಭೆಯು ಶ್ರೀ ಡಿ.ಪಿ.ವಿಕಾಸ್ ಇವರನ್ನು ಅನುಕಂಪದ ಆಧಾರದ ಮೇಲೆ ದ್ವಿತೀಯ ದರ್ಜೆ ಗುಮಾಸ್ತರ ಹುದ್ದೆಯಲ್ಲಿ ನೇಮಕಾತಿ ಮಾಡಲು ಅನುಮೋದಿಸಿತು.</td></tr>
</table>

| | |
|---|---|
| ಸಾಮಾನ್ಯ ಸಭೆ 2021/9.30 | DRDO & DFRL ಮತ್ತು UOM ಸಂಸ್ಥೆಗಳ ಸಹಯೋಗದೊಂದಿಗೆ Food Science and Technology (PG) ವಿಷಯದಲ್ಲಿ MHRD Fellowship ನೀಡುವ ಉದ್ದೇಶದಿಂದ ಪ್ರತ್ಯೇಕವಾಗಿ ಹೊಸ ಅಧ್ಯಯನ ಮಂಡಳಿ ರಚಿಸಿರುವ ಬಗ್ಗೆ-ಅನುಸಮರ್ಥನೆಗಾಗಿ. |
| ತೀರ್ಮಾನ | ಡಾ. ಎಂ.ವೈ.ಶ್ರೀನಿವಾಸ್, ಪ್ರಾಧ್ಯಾಪಕರು ಮತ್ತು ಸಂಯೋಜಕರು, ಸೂಕ್ಷ್ಮ ಜೀವಾಣುಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು DRDO & DFRL ಮತ್ತು UOM ಸಂಸ್ಥೆಗಳ ಸಹಯೋಗದೊಂದಿಗೆ Food Science and Technology (PG) ವಿಷಯದಲ್ಲಿ MHRD Fellowship ನೀಡುವ ಉದ್ದೇಶದಿಂದ ಒಡಂಬಡಿಕೆ ಮಾಡಿಕೊಂಡಿದ್ದು, ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಿಂಡಿಕೇಟ್ ನಿರ್ಣಯವನ್ನು ಕಾಯ್ದಿರಿಸಿ Food Science and Technology (PG) ವಿಷಯದಲ್ಲಿ ಅಧ್ಯಯನ ಮಂಡಳಿಯನ್ನು ರಚಿಸಿ ದಿನಾಂಕ: 20-09-2021ರಂದು ಅಧಿಸೂಚನೆಯನ್ನು ಹೊರಡಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2021/9.31 | M.Tech in Material Science (PG) ಅಧ್ಯಯನ ಮಂಡಳಿಯನ್ನು ಪುನರ್‌ರಚಿಸಿರುವ ಬಗ್ಗೆ ಅನುಸಮರ್ಥನೆಗಾಗಿ. |
| ತೀರ್ಮಾನ | ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಿಂಡಿಕೇಟ್ ನಿರ್ಣಯವನ್ನು ಕಾಯ್ದಿರಿಸಿ, M.Tech in Material Science (PG) ಅಧ್ಯಯನ ಮಂಡಳಿಯನ್ನು ಮೂರು ವರ್ಷಗಳ ಅವಧಿಗೆ ಪುನರ್‌ರಚಿಸಿ ದಿನಾಂಕ: 21-10-2021ರಂದು ಅಧಿಸೂಚನೆ ಹೊರಡಿಸಿರುವುದನ್ನು ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2021/9.32 | ಡಾ. ಬಿ.ಹೆಚ್. ಸುರೇಶ್, ನಿವೃತ್ತ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸುವ ಬಗೆಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 53(10)ರಲ್ಲಿರುವ ಅವಕಾಶದನುಸಾರ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಡಾ. ಬಿ.ಹೆಚ್. ಸುರೇಶ್, ನಿವೃತ್ತ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ವಿವಿ ಆದೇಶ ಸಂಖ್ಯೆ: ಇಟಿ.9/309/2019-20, ದಿನಾಂಕ: 29-10-2021ರಿಂದ ಒಂದು ವರ್ಷದ ಅವಧಿಗೆ ಸಂದರ್ಶಕ ಪ್ರಾಧ್ಯಾಪಕರಾಗಿ ಮಾಹೆಯಾನ ರೂ.25,000/-ಗಳ ಗೌರವಧನದೊಂದಿಗೆ ನೇಮಕ ಮಾಡಿರುವುದನ್ನು ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2021/9.33 | ಪ್ರೊ. ಸಿ. ನಾಗಣ್ಣ, ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ನೇಮಿಸಿರುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 53(10)ರಲ್ಲಿರುವ ಅವಕಾಶದನುಸಾರ ಹಾಗೂ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಪ್ರೊ. ಸಿ. ನಾಗಣ್ಣ, ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರನ್ನು ವಿವಿ ಆದೇಶ ಸಂಖ್ಯೆ: ಇಟಿ.11/704/2018-19, ದಿನಾಂಕ: 27-10-2021ರಿಂದ ಒಂದು ವರ್ಷದ ಅವಧಿಗೆ ಸಂದರ್ಶಕ ಪ್ರಾಧ್ಯಾಪಕರಾಗಿ ಮಾಹೆಯಾನ ರೂ.25,000/-ಗಳ ಗೌರವಧನದೊಂದಿಗೆ ನೇಮಕ ಮಾಡಿರುವುದನ್ನು ಸಭೆಯು ಅನುಸಮರ್ಥಿಸಿತು. |

| | |
|---|---|
| ಸಾಮಾನ್ಯ ಸಭೆ 2021/9.34 | Applied Botany (PG) ವಿಷಯದಲ್ಲಿ ಪ್ರತ್ಯೇಕ ಅಧ್ಯಯನ ಮಂಡಳ ರಚಿಸಿರುವ ಬಗ್ಗೆ-ಅನುಸಮರ್ಥನೆಗಾಗಿ |
| ತೀರ್ಮಾನ | ಡೀನರ ಶಿಫಾರಸ್ಸಿನನ್ವಯ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ Applied Botany (PG) ವಿಷಯದಲ್ಲಿ ಪ್ರತ್ಯೇಕ ಅಧ್ಯಯನ ಮಂಡಳಿಯನ್ನು ರಚಿಸಿ ದಿನಾಂಕ: 29-10-2021ರಂದು ಅಧಿಸೂಚನೆ ಹೊರಡಿಸಿರುವುದನ್ನು ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2021/9.35 | ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆತ್ತೂರು ಇವರ ಪದನಾಮದಲ್ಲಿ ಉಳಿತಾಯ ಖಾತೆಯನ್ನು (Savings Account) ತೆರೆಯಲು ಈಗಾಗಲೇ ಅನುಮತಿಸಿರುವ ವಿಷಯವನ್ನು ಅನುಸಮರ್ಥನೆಗಾಗಿ ಮಂಡಿಸಿದೆ. |
| ತೀರ್ಮಾನ | ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆತ್ತೂರು ಇವರ ಪದನಾಮದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹೆತ್ತೂರು ಶಾಖೆ, ಹೆತ್ತೂರಿನಲ್ಲಿ ಉಳಿತಾಯ ಖಾತೆಯನ್ನು (Savings Account) ತೆರೆಯಲು ವಿವಿ ಆದೇಶ ಸಂಖ್ಯೆ: ಜಿಎಲ್.4/ 212/2014-15, ದಿನಾಂಕ: 28-10-2021ರಂದು ನೀಡಿರುವ ಅನುಮತಿಯನ್ನು ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2021/9.36 | Providing and Supplying lab Equipment's, All-in-one System and Telecommunication facilities to School of Engineering at University of Mysore, Manasagangotri, Mysuru ಕಾರ್ಯವನ್ನು ಕೈಗೊಳ್ಳಲು ಮತ್ತು ಅಂದಾಜು ಮೊತ್ತಗಳಿಗೆ ಅನುಮೋದನೆ ನೀಡುವ ಬಗ್ಗೆ. |
| ತೀರ್ಮಾನ | Providing and Supplying lab Equipment's, All-in-one System and Telecommunication facilities to School of Engineering at University of Mysore, Manasagangotri, Mysuru ಕಾರ್ಯವನ್ನು ನಿಯಮಾನುಸಾರ ಖರೀದಿಸಿ ಅಳವಡಿಸುವ ಸಂಬಂಧ ಅಂದಾಜು ಪಟ್ಟಿಯನ್ನು ರೂ.2,46,14,954/-ಗಳಿಗೆ ತಯಾರಿಸಿದ್ದು, ಸದರಿ ಕಾರ್ಯವನ್ನು ನಿಯಮಾನುಸಾರ ಕರ್ನಾಟಕ ಸರ್ಕಾರದ ಪಾರದರ್ಶಕ ಅಧಿನಿಯಮ 1999 & 2000 (ಕೆಟಿಟಿಪಿ ಕಾಯ್ದೆ) ಅನುಸರಿಸಿ ಟೆಂಡರ್ ಪ್ರಕ್ರಿಯೆಗಳನ್ನು ಕೈಗೊಂಡು ಕಾರ್ಯನಿರ್ವಹಿಸಲು ನಿರ್ದೇಶಕರು, ಸಾಮರ್ಥ್ಯಾಭಿವೃದ್ಧಿ ಮತ್ತು ಉದ್ಯೋಗಾವಕಾಶಗಳ ಸೇವಾ ಕೇಂದ್ರ, ಮಾನಸಗಂಗೋತ್ರಿ, ಮೈಸೂರು ಇವರಿಗೆ ಅನುಮತಿ ನೀಡಿರುವುದನ್ನು ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2021/9.37 | 2017-18ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪರಿಶೋಧನಾ ವರದಿಯ ಆಕ್ಷೇಪಣೆಗಳಿಗೆ ಅನುಪಾಲನಾ ವರದಿ. |
| ತೀರ್ಮಾನ | 2017-18ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪರಿಶೋಧನಾ ವರದಿಯ ಆಕ್ಷೇಪಣೆಗಳಿಗೆ ಸಿದ್ಧಪಡಿಸಲಾಗಿರುವ ಅನುಪಾಲನಾ ವರದಿಯನ್ನು ಸಭೆಯಲ್ಲಿ ~~ಗಮನಿಸಲಾಯಿತು.~~ ಅನುಮೋದಿಸಲಾಯಿತು. |
| ಸಾಮಾನ್ಯ ಸಭೆ 2021/9.38 | ಉತ್ತರ ಪತ್ರಿಕೆಗಳನ್ನು ದುರ್ಬಳಕೆ ಮಾಡಿಕೊಂಡಿರುವ ಸಂಬಂಧ ನಡೆದ ವಿಚಾರಣ ಸಮಿತಿ ಸಭೆಯ ವರದಿ. |
| ತೀರ್ಮಾನ | ಉತ್ತರ ಪತ್ರಿಕೆಗಳನ್ನು ದುರ್ಬಳಕೆ ಮಾಡಿಕೊಂಡಿರುವ ಸಂಬಂಧ ನಡೆದ ವಿಚಾರಣ ಸಮಿತಿ ಸಭೆಯ ವರದಿಯನ್ನು ಸಭೆಯಲ್ಲಿ ಗಮನಿಸಲಾಯಿತು. |

ಇತರೆ ವಿಷಯಗಳು:

* ಶ್ರೀ. ಆರ್.ಪ್ರದೀಪ್ ಕುಮಾರ್ ದೀಕ್ಷಿತ್, ಶ್ರೀ ಎಸ್.ಡಿ.ದೊಡ್ಡಚಾರಿ, ಡಾ. ಚೈತ್ರ ನಾರಾಯಣ, ಶ್ರೀ ಗಪ್ಪಣ್ಣ, ಡಾ.ಈ.ಸಿ.ನಿಂಗರಾಜ್ ಗೌಡ, ಶ್ರೀಮತಿ ವೈ.ಕೆ.ಪವಿತ್ರ ಮತ್ತು ಡಾ. ಎಂ.ಎಸ್.ದಾಮೋಧರ ಅವರುಗಳು ಮಾತನಾಡಿ, ವಿವಿಧ ಅಧ್ಯಯನ ವಿಭಾಗಗಳಿಗೆ ಅಧ್ಯಕ್ಷರುಗಳನ್ನು ನೇಮಕ ಮಾಡುವುದಕ್ಕೆ ಸಂಬಂಧಿಸಿದಂತೆ ಸಿದ್ಧಪಡಿಸಿರುವ ನಿಯಮಾವಳಿಯ ಸುತ್ತೋಲೆಯು ವಾಟ್ಸಪ್ ಗ್ರೂಪ್‌ಗಳಲ್ಲಿ Share ಆಗಿರುವುದು ಕಂಡು ಬಂದಿದ್ದು, ಈ ಸಂಬಂಧ ಕೆಲವು ವಿಭಾಗದ ಅಧ್ಯಕ್ಷರುಗಳು ನಮ್ಮಗಳ ಗಮನಕ್ಕೆ ತಂದು, ಹಲವು ಸ್ಪಷ್ಟೀಕರಣಗಳನ್ನು ಸಹ ಕೋರಿರುತ್ತಾರೆ. ಈ ಬಗ್ಗೆ ಸೂಕ್ತ ತನಿಖೆ ಕೈಗೊಂಡು ವಾಟ್ಸಪ್ ಗ್ರೂಪ್‌ಗಳಲ್ಲಿ Share ಮಾಡಿರುವವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಪಡಿಸಿದರು. ಈ ಸಂಬಂಧ ಮಾತನಾಡಿದ ಮಾನ್ಯ ಕುಲಪತಿಗಳು ವಿವಿಧ ಅಧ್ಯಯನ ವಿಭಾಗಗಳಿಗೆ ಅಧ್ಯಕ್ಷರುಗಳನ್ನು ನೇಮಕ ಮಾಡುವುದಕ್ಕೆ ಸಂಬಂಧಿಸಿದಂತೆ ಸಿದ್ಧಪಡಿಸಿರುವ ನಿಯಮಾವಳಿಯನ್ನು ಸುತ್ತೋಲೆ ಹೊರಡಿಸುವುದಕ್ಕೆ ಕ್ರಮ ತೆಗೆದುಕೊಳ್ಳಲಾಗಿತು. ಆದರೆ, ಇದುವರೆವಿಗೂ ಅಧಿಕೃತವಾಗಿ ಸುತ್ತೋಲೆ ಹೊರಡಿಸಿರುವುದಿಲ್ಲವೆಂದು ಸಭೆಯ ಗಮನಕ್ಕೆ ತರುತ್ತಾ, ಮುಂದಿನ ದಿನಗಳಲ್ಲಿ ಈ ರೀತಿಯ ಪ್ರಮಾದವಾಗದಂತೆ ಎಚ್ಚರಿಕೆ ವಹಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

* ಡಾ. ಚೈತ್ರ ನಾರಾಯಣ ಅವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ವಿಭಾಗಗಳ ಅಧ್ಯಕ್ಷರುಗಳ ನೇಮಕಾತಿಗೆ ಸಂಬಂಧಿಸಿದಂತೆ ನಿಯಮಾವಳಿಯನ್ನು ರಚಿಸಿರುವಂತೆ, ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳ ಪ್ರಾಂಶುಪಾಲರುಗಳ ನೇಮಕಾತಿ ಮಾಡುವ ಸಂಬಂಧ ನಿಯಮಾವಳಿ ರಚಿಸುವುದು ಸೂಕ್ತವೆಂದು ಪ್ರಸ್ತಾಪಿಸುತ್ತಾ, ಮಾನ್ಯ ಕುಲಪತಿಯವರು ಪರಿಶೀಲನಾ ಸಮಿತಿಯನ್ನು ರಚಿಸಿ, ಪ್ರತಿ ವರ್ಷ ಎರಡು ಬಾರಿ ಘಟಕ ಕಾಲೇಜುಗಳಿಗೆ ಭೇಟಿ ನೀಡಿ ವರದಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಸಭೆಯಲ್ಲಿ ತಿಳಿಸಿದರು.

  ಈ ಸಂಬಂಧ ಒಬ್ಬರು ಸಿಂಡಿಕೇಟ್ ಸದಸ್ಯರು ಹಾಗೂ ಮೂವರು ಇತರೆ ಸದಸ್ಯರನ್ನೊಳಗೊಂಡಂತೆ ಪರಿಶೀಲನಾ ಸಮಿತಿಯನ್ನು ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

* ಡಾ. ಈ.ಸಿ.ನಿಂಗರಾಜ್ ಗೌಡ ಹಾಗೂ ಶ್ರೀಮತಿ ವೈ.ಕೆ.ಪವಿತ್ರ ಅವರುಗಳು ಮಾತನಾಡಿ, Center for the Study of Social Exclusion and Inclusive Policy ಕೇಂದ್ರಕ್ಕೆ ಸಿದ್ಧಪಡಿಸಲಾಗಿರುವ ಕರಡು ಅಧಿನಿಯಮದ 6ನೇ ಕಂಡಿಕೆಯ Creation of Posts ನ Non-teaching Staff ನಲ್ಲಿ (d) ಕ್ರಮ ಸಂಖ್ಯೆಯಲ್ಲಿ Library Attendant ಎಂಬುದರ ಬದಲಾಗಿ Library Assistant ಎಂದು ತಿದ್ದುಪಡಿ ಮಾಡಿ ಸರ್ಕಾರಕ್ಕೆ ಕಳುಹಿಸಬೇಕೆಂದು ಸಭೆಯ ಗಮನಕ್ಕೆ ತಂದರು. ಈ ಸಲಹೆಗೆ ಪ್ರೊ. ರಮೇಶ್ ಅವರು ಒಪ್ಪಿಗೆ ಸೂಚಿಸಿದರು.

* ಶ್ರೀ. ಆರ್.ಪ್ರದೀಪ್ ಕುಮಾರ್ ದೀಕ್ಷಿತ್, ಶ್ರೀ ಎಸ್.ಡಿ.ದೊಡ್ಡಚಾರಿ, ಡಾ. ಚೈತ್ರ ನಾರಾಯಣ ಮತ್ತು ಡಾ. ಎಂ.ಎಸ್.ದಾಮೋದರ ಅವರುಗಳು ಮಾತನಾಡಿ, ಪ್ರೊ. ಪಿ.ಮಾದೇಶ್ ಅವರು ಭೂವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷರಾಗಿ ಹಾಗೂ ಆಡಳಿತಾಧಿಕಾರಿಗಳ ಕಛೇರಿಯಲ್ಲಿ ಆಡಳಿತಾಧಿಕಾರಿಯಾಗಿ ಎರಡು ಕಡೆಗಳಲ್ಲೂ ಪೂರ್ಣಕಾಲಿಕ ಹುದ್ದೆಯನ್ನು ವಹಿಸಿಕೊಂಡಿರುವುದು ಸರಿಯಷ್ಟೆ. ಆದರೆ, ಈ ಎರಡು ಹುದ್ದೆಯ ಬದಲಾಗಿ ಒಂದು ಹುದ್ದೆಯಲ್ಲಿ ಮಾತ್ರ ಪೂರ್ಣಕಾಲಿಕ ಹುದ್ದೆಗೆ ನೇಮಕಾತಿ ಮಾಡುವುದು ಸೂಕ್ತ ಹಾಗೂ ವಿಶ್ವವಿದ್ಯಾನಿಲಯವು ಅತಿಥಿ ಉಪನ್ಯಾಸಕರಾಗಿ ನೇಮಕಾತಿ ಮಾಡಿರುವ ಶ್ರೀ ಅಭಿಜಿತ್ ಅವರನ್ನು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿರುವುದು ಮತ್ತು ಸದರಿ ಅತಿಥಿ ಉಪನ್ಯಾಸಕರಿಗೆ ಅವಾಚ್ಯ ಪದವನ್ನು ಉಪಯೋಗಿಸಿ ಮಾತನಾಡಿರುವುದು ಸರಿಯಲ್ಲ. ಈ ಸಂಬಂಧ ಪ್ರೊ. ಪಿ.ಮಾದೇಶ್ ಅವರಿಗೆ ನೋಟೀಸ್ ಜಾರಿಗೊಳಿಸಬೇಕೆಂದು ಒಕ್ಕೊರಲಿನಿಂದ ಆಗ್ರಹಿಸಿದರು. ಹಾಗೆಯೇ, ಪ್ರಸಕ್ತ ಸಾಲಿನಲ್ಲಿ ಸ್ನಾತಕೋತ್ತರ ಪದವಿ ಪೂರ್ಣಗೊಳಿಸಿರುವ ಪ್ರೊ. ಪಿ.ಮಾದೇಶ್ ಅವರ ಮಗನಾದ

ಶ್ರೀ ದರ್ಶನ್.ಎಂ.ಎಸ್ ಅವರಿಗೆ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಸೇವಾರ್ಹತೆ ಇಲ್ಲದಿದ್ದರೂ ಪ್ರಸಕ್ತ ಸಾಲಿಗೆ 12 ಗಂಟೆಗಳ ಬೋಧನಾ ಕಾರ್ಯಭಾರವನ್ನು ಹಂಚಿಕೆ ಮಾಡಿರುವುದು ಸರಿಯಲ್ಲ. ಇವರಿಗೆ 12 ಗಂಟೆಗಳ ಬೋಧನಾ ಕಾರ್ಯಭಾರವನ್ನು ಹಂಚಿಕೆ ಮಾಡುವ ಬದಲು 08 ಗಂಟೆಗಳ ಬೋಧನಾ ಕಾರ್ಯವನ್ನು ಹಂಚಿಕೆ ಮಾಡಿ, ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಸಲ್ಲಿಸಿರುವ ಬೇರೆ ಅಭ್ಯರ್ಥಿಗೆ 04 ಗಂಟೆಗಳ ಬೋಧನಾ ಕಾರ್ಯವನ್ನು ನೀಡಬೇಕೆಂದು ತಿಳಿಸಿದರು.

ಈ ಸಂಬಂಧ ಮಾನ್ಯ ಕುಲಪತಿಯವರು ಮಾತನಾಡಿ, ವಿಶ್ವವಿದ್ಯಾನಿಲಯವು ಅತಿಥಿ ಉಪನ್ಯಾಸಕರಾಗಿ ನೇಮಕಾತಿ ಮಾಡಿರುವ ಶ್ರೀ ಅಭಿಜಿತ್ ಅವರನ್ನು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿರುವ ಬಗ್ಗೆ ಹಾಗೂ ಸದರಿ ಆಭ್ಯರ್ಥಿಗೆ ಅವಾಚ್ಯ ಪದಗಳನ್ನು ಉಪಯೋಗಿಸಿರುವ ಸಂಬಂಧ ಪ್ರೊ. ಪಿ.ಮಾದೇಶ್ ಅವರಿಗೆ ಕಾರಣ ಕೇಳುವ ನೋಟೀಸ್ ಜಾರಿಗೊಳಿಸಲಾಗುವುದು. ಸದರಿಯವರ ಉಚಿತ ಉತ್ತರವನ್ನು ಪರಾಮರ್ಶಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು.

* ಪ್ರೊ. ರಮೇಶ್, ಡೀನರು ಹಾಗೂ ಸಿಂಡಿಕೇಟ್ ಸದಸ್ಯರು, ಕಾನೂನು ನಿಕಾಯ ಇವರು ಮಾತನಾಡಿ "ವಿಶ್ವವಿದ್ಯಾನಿಲಯ ಕಾನೂನು ಶಾಲೆ" ಇರುವ ಕಟ್ಟಡದಲ್ಲಿಯೇ ತರಗತಿ ಕೊಠಡಿಗಳನ್ನು ನಿರ್ಮಿಸಿಕೊಡುವುದರ ಮೂಲಕ "ಕಾನೂನು ಅಧ್ಯಯನ ವಿಭಾಗ"ವನ್ನು ಸ್ಥಳಾಂತರಿಸಿಕೊಡಬೇಕೆಂದು ಅಧ್ಯಕ್ಷರಿಗೆ ಮನವಿ ಮಾಡಿದರು.

ಈ ಸಂಬಂಧ ಮಾನ್ಯ ಕುಲಪತಿಯವರು ಮಾತನಾಡಿ, ಮುಂದಿನ ದಿನಗಳಲ್ಲಿ ತಮ್ಮ ಮನವಿಯನ್ನು ಪರಿಶೀಲಿಸಲಾಗುವುದೆಂದು ತಿಳಿಸಿದರು.

ಅಂತಿಮವಾಗಿ ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ, ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕಾರ ಹಾಗೂ ಸಲಹೆಗಳನ್ನು ನೀಡಿರುವ ಎಲ್ಲಾ ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

**ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿ** | **ಕುಲಪತಿಗಳು ಮತ್ತು ಅಧ್ಯಕ್ಷರು**